**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 2556/2022**

ಸರ್ಕಾರದ ಪರವಾಗಿ
ಕೋಟಾ ಠಾಣಾ ಪೋಲಿಸರು --- ಪಿರ್ಯಾದಿದಾರರು

ರಾಘವೇಂದ್ರ ಶೆಟ್ಟಿ, 43 ವರ್ಷ,
ತಂದೆ: ದಿ. ಶ್ರೀಧರ ಶೆಟ್ಟಿ,
ವಾಸ: ಜವಳಿ ಹೌಸ್,
ಹೊಳೆ ಶಂಕರನಾರಾಯಣ,
ಸಿದ್ಧಾಪುರ ಅಂಚೆ,
ಕುಂದಾಪುರ ತಾಲೂಕು. --- ಆರೋಪಿ

**ಃಆಪಾದನೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆಃ**

ದಿ. 27.08.2022 ರಂದು ಮಧ್ಯಾಹ್ನ 01.00 ಗಂಟೆಗೆ ಕೆಎ 20 ಇವಿ 5282 ನೇ ನಂಬ್ರದ ಫಲ್ಸರ್ ಮೋಟಾರು ಸೈಕಲಿನಲ್ಲಿ ಹೆಂಡತಿ ಶಾಂಭವಿ ಜಿ ಮತ್ತು ಮಗ ಶ್ರೇಣಿಕ ಎಂಬವರನ್ನು ಹಿಂದೆ ಕುಳ್ಳಿರಿಸಿಕೊಂಡು ಹುಣ್ಸೆಮಕ್ಕಿ ಕಡೆಯಿಂದ, ಬೇಳೂರು ಕಡೆಗೆ ಹೋಗುವರೇ ಕುಂದಾಪುರ ತಾಲೂಕು, ಬೇಳೂರು ಗ್ರಾಮದ ಮುಳ್ಳುಗುಡ್ಡೆಯಿಂದ ಸ್ವಲ್ಪ ಮುಂದೆ ಗಣಪತಿ ದೇವಸ್ಥಾನದ ಹತ್ತಿರ ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಹೋಗುತ್ತಿರುವಾಗ ರಸ್ತೆಯಲ್ಲಿದ್ದ ಹಾವನ್ನು ನೋಡಿ, ಒಮ್ಮೇಲೆ ನಿರ್ಲಕ್ಷವಾಗಿ ಬ್ರೇಕ್ ಹಾಕಿದ ಪರಿಣಾಮ ಮೋಟಾರು ಸೈಕಲ್ ಸ್ಕಿಡ್ ಆಗಿದ್ದರಿಂದ ಸಹಸವಾರಳಾದ ಶಾಂಭವಿ ಜಿ. ಇವರು ಕೆಳಗೆ ರಸ್ತೆಗೆ ಬಿದ್ದು, ತಲೆಗೆ, ಹಣೆಗೆ ತೀವ್ರ ತರದ ರಕ್ತಗಾಯ ಮತ್ತು ಭುಜಕ್ಕೆ ಒಳನೋವು ಉಂಟಾಗಿದ್ದು, ಮೋಟಾರು ಸೈಕಲ್‌ನಲ್ಲಿದ್ದ ಆಪಾದಿತ ಹಾಗೂ ಶ್ರೇಣಿಕ ಇವರಿಗೆ ಯಾವುದೇ ಗಾಯಗಳಾಗಿರುವುದಿಲ್ಲ. ನಂತರ ಕೂಡಲೇ ಗಾಯಗೊಂಡ ಶಾಂಭವಿ ಜಿ. ರವರನ್ನು ಚಿಕಿತ್ಸೆ ಬಗ್ಗೆ ಕೋಟೇಶ್ವರದ ಎನ್.ಆರ್. ಆಚಾರ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯರ ಸೂಚನೆಯಂತೆ ಹೆಚ್ಚಿನ ಚಿಕಿತ್ಸೆಯ ಬಗ್ಗೆ ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಚಿಕಿತ್ಸೆಯಲ್ಲಿದ್ದ ಗಾಯಾಳು ಶಾಂಭವಿ ಜಿ ಇವರು ಚಿಕಿತ್ಸೆಗೆ ಸ್ಪಂದಿಸದೇ ದಿ. 02.09.2022 ರಂದು ರಾತ್ರಿ 9.50 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304 (ಎ)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ :04.02.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :2556/2022**

ಫಿರ್ಯಾದುದಾರರು : ಸರಕಾರದ ಪರವಾಗಿ ಕೋಟಾ ಠಾಣಾ ಪೋಲಿಸರು,

- ವಿರುದ್ಧ-

ಆರೋಪಿ : ರಾಘವೇಂದ್ರ ಶೆಟ್ಟಿ, ತಂದೆಃ ದಿ. ಶ್ರೀಧರ ಶೆಟ್ಟಿ,

1. ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ಆಪಾದನೆಯ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?

ಉ.

2. ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.